ಓ.ಎಸ್. ನಂ. 210/2014

ಪಿ.ಡಬ್ಲ್ಯು: 01

ದಿನಾಂಕಃ 28.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ HBR ವಕೀಲರಿಂದ.

ನನ್ನ ತಂದೆಯ ಮನೆತನದ ಹೆಸರು ಕುಡಯ್ಯಗಳ ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ನಾಗಪ್ಪ ಎಂದರೆ ಸರಿ. ಆದರೆ ಅವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾಗಪ್ಪನ ಮಕ್ಕಳ ಪೈಕಿ ನನ್ನ ದೊಡ್ಡಪ್ಪ ಮೂಗಪ್ಪ, ನಂತರ ನನ್ನ ತಂದೆ, ನಂತರ 7 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ. ಊರಿನಲ್ಲಿ ನಮಗೆ ಹಾಗೂ ಪ್ರತಿವಾದಿ 7, ಮೂಗಪ್ಪ ರವರಿಗೆ 3 ಮನೆಗಳು ಇದ್ದವು. ಅವುಗಳು ಅಕ್ಕಪಕ್ಕದಲ್ಲಿ ಇದ್ದವು. 7 ನೇ ಪ್ರತಿವಾದಿ ಎಲ್ಲಿ ವಾಸಿಸುತ್ತಿದ್ದರು ಎಂದರೆ ಒಟ್ಟಿಗೆ ವಾಸಿಸುತ್ತಿದ್ದೆವು ಸಾಕ್ಷಿ ಮುಂದುವರೆದು ಕಣದ ಮನೆಯಲ್ಲಿದ್ದರು. ನನ್ನ ಮದುವೆ ಕೆಳಗಿನ ಮನೆಯಲ್ಲಿ ಆಗಿರುತ್ತದೆ. ಅದರಲ್ಲಿ ನಾವೆಲ್ಲ ಒಟ್ಟಾಗಿ ವಾಸಿಸುತ್ತಿದ್ದೆವು. 1 ನೇ ಪ್ರತಿವಾದಿಯನ್ನು 8 ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಅವರು ನನ್ನ ಸೋದರ ಮಾವನ ಮಗ ಆಗಿರುತ್ತಾರೆ. 8 ನೇ ಪ್ರತಿವಾದಿಗೆ ನಮ್ಮ ಕುಟುಂಬದ ಬಗ್ಗೆ ಹೆಚ್ಚಾಗಿ ತಿಳಿದಿರುತ್ತದೆ ಎಂದರೆ ನಮಗೂ ಗೊತ್ತು. 8 ನೇ ಪ್ರತಿವಾದಿಗೂ ಗೊತ್ತು. 7 ನೇ ಪ್ರತಿವಾದಿಯ ವಾರಸುದಾರರು ಹಾಕಿದ ತಕರಾರು ಬಗ್ಗೆ ನನಗೆ ಗೊತ್ತು.

ನಾನು ದಾವಾ ಸ್ವತ್ತುಗಳ ಪಹಣಿ ಪತ್ರಿಕೆಗಳನ್ನು ದಾವೆ ಸಲ್ಲಿಸುವ ಸಮಯದಲ್ಲಿ ಸಲ್ಲಿಸಿದ್ದು ಅವು 1995 ರಲ್ಲಿ ಪ್ರತ್ಯೇಕವಾಗಿ ಮೇಲೆ ಹೇಳಿದ 3 ಜನರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಅವರ ಒಡಹುಟ್ಟಿದವರು ಸಹಿ ಹಾಕುವುದಿಲ್ಲ ಹೆಬ್ಬೆಟ್ಟು ಹಾಕುತ್ತಾರೆ, ಅವರು ಓದಿರುವುದಿಲ್ಲ. ದಾವಾ ಸ್ವತ್ತು ಐಟಂ ನಂಬರ್ 5-8 ನ್ನು ನಮ್ಮ ಚಿಕ್ಕಪ್ಪನವರೇ ಉಳುಮೆ ಮಾಡುತ್ತಿದ್ದರು ಎಂದರೆ ಸುಳ್ಳು. ಐಟಂ ನಂಬರ್ 8 ರಲ್ಲಿ ನನ್ನ ಚಿಕ್ಕಪ್ಪನವರೇ ಮನೆ ಕಟ್ಟಿರುತ್ತಾರೆ ಎಂದರೆ ಎಲ್ಲರೂ ಒಟ್ಟಿಗೆ ಕಟ್ಟಿಸಿರುತ್ತೇವೆ. ಸದರಿ ಮನೆ ಕಟ್ಟುವಾಗಿ 7 ನೇ ಪ್ರತಿವಾದಿಯವರು ಸರಕಾರದಿಂದ ಸವಲತ್ತನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಅವರ ಒಡಹುಟ್ಟಿದವರು ಜೀವಂತ ಇದ್ದಾಗ ಚೆನ್ನಾಗಿ ಇದ್ದರು ಎಂದರೆ ಹೌದು. ಅವರುಗಳು ಅವರ ಪತ್ನಿಯರೊಂದಿಗೆ ಪ್ರತ್ಯೇಕ ಮನೆಯಲ್ಲಿ ವಾಸಿಸುತ್ತಿದ್ದರು ಎಂದರೆ ಅವರ ಒಡಹುಟ್ಟಿದವರು ಚೆನ್ನಾಗಿದ್ದರು ಆದರೆ ಹೆಣ್ಣು ಮಕ್ಕಳ ನಡುವೆ ಚೆನ್ನಾಗಿಲ್ಲದಿದ್ದ ಕಾರಣ ಪ್ರತ್ಯೇಕವಾಗಿ ಅಡುಗೆ ಮಾಡಿಕೊಳ್ಳುತ್ತಿದ್ದರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.